

بسم اللهِ الرّحمٰنِ الرّحيم

# ಖಿಲಾಫತ್, ಪ್ರಾರ್ಥನೆಗಳು ಹಾಗೂ ರಕ್ತಸಾಕ್ಷಿ ಡಾಕ್ಟರ್ ಮಹ್‌ದಿ ಅಲಿ ಖಮರ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **30-05-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಅಲ್ಲಾಹನ ಬಹಳ ದೊಡ್ಡ ಒಂದು ಅನುಗ್ರಹವೇನೆಂದರೆ ಅವನು ಅಹ್ಮದಿಯಾ ಜಮಾಅತನ್ನು ಒಂದೇ ದಾರದಲ್ಲಿ ಪೋಣಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಂತರ ಖಿಲಾಫತ್ ವ್ಯವಸ್ಥೆ ನಮ್ಮ ಜಮಾಅತಿನಲ್ಲಿ ಜಾರಿಗೊಂಡಿತು. ಅಹ್ಮದಿಯಾ ಜಮಾಅತಿನ ಕಳೆದ 106 ವರ್ಷಗಳ ಚರಿತ್ರೆ ಸಾಕ್ಷಿ ಹೇಳುತ್ತಿದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು **"ಅಲ್ ವಸಿಯ್ಯತ್"**ನಲ್ಲಿ ವಿವರಿಸಿದ ಪ್ರಕಾರ ಸ್ಥಾಪಿತವಾದ ಖಿಲಾಫತ್ ವ್ಯವಸ್ಥೆಯನ್ನು ಜಮಾಅತಿನ ಸದಸ್ಯರು ಅಂಗೀಕರಿಸಿ, ಅದನ್ನು ಪರಿಪೂರ್ಣವಾಗಿ ಅನುಸರಿಸುತ್ತಿರುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉನ್ನತ ಸ್ಥಾನಮಾನಗಳನ್ನು ಮನವರಿಕೆ ಮಾಡಿಕೊಂಡಿರುವ ಈ ಜಮಾಅತ್, ತಮ್ಮನ್ನು ಖಿಲಾಫತ್‌ನೊಂದಿಗೆ ಜೋಡಿಸಿಟ್ಟುಕೊಳ್ಳುವುದೇ ಮುಖ್ಯವಾದ ಸಂಗತಿಯಾಗಿದೆ ಎಂಬ ಜ್ಞಾನವನ್ನು ಗಳಿಸಿರುತ್ತದೆ. ಅದರ ಮೂಲಕವೇ ಜಮಾಅತ್ ಐಕ್ಯದಿಂದಿದೆ. ಅದರ ಮೂಲಕವೇ ಜಮಾಅತಿಗೆ ಅಭಿವೃದ್ಧಿ ಲಭಿಸುತ್ತಿದೆ. ಅಹ್ಮದಿಯತ್ತಿನ ಶತ್ರುಗಳ ಮತ್ತು ಇಸ್ಲಾಮಿನ ಶತ್ರುಗಳ ಆಕ್ರಮಣಗಳಿಗೆ ಉತ್ತರ ನೀಡುವ ಶಕ್ತಿ ನಮಗೆ ದೊರಕುವುದು ಸಹ ಅದರ ಮೂಲಕವಾಗಿದೆ. ಆದುದರಿಂದ ಪ್ರಾರ್ಥನೆಗಳ ಕಡೆಗೆ ನಾವು ಶ್ರದ್ಧೆ ನೀಡುತ್ತಾ ಇದ್ದರೆ, ತೌಹೀದ್ ಎನ್ನುವುದರ ವಾಸ್ತವಿಕ ಅರ್ಥ ಏನು ಎನ್ನುವುದನ್ನು ಮನವರಿಕೆ ಮಾಡಿಕೊಳ್ಳುವ ಬಗ್ಗೆ ನಾವು ಗಮನ ಹರಿಸುವುದಾದರೆ, ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ವಾಗ್ದಾನ ಮಾಡಿದ ಅನುಗ್ರಹಗಳಿಗೆ ನಮ್ಮಲ್ಲಿ ಪ್ರತಿಯೊಬ್ಬರೂ ವಾರೀಸುದಾರರಾಗುವೆವು. ನಾನು ಕಳೆದ ವಾರದ ಖುತುಬದಲ್ಲಿ ಸಹ ಹೇಳಿದ್ದೆನು, ಪ್ರತಿಯೊಂದು ಕಷ್ಟದ ಸಮಯದಲ್ಲಿ ನಾವು ಅಲ್ಲಾಹನ ಮುಂದೆ ಬಾಗಿಕೊಂಡು ಪ್ರಾರ್ಥಿಸಬೇಕೆಂದು. ಲೌಕಿಕ ಜನರು ಮಾಡುವಂತಹ ಪ್ರತಿಭಟನೆಗಳ ಬಗ್ಗೆ ನಮಗೆ ಆಸಕ್ತಿ ಇಲ್ಲ. ಖಿಲಾಫತ್‌ನೊಂದಿಗೆ ಸಂಬಂಧವನ್ನು ಜೋಡಿಸಿಕೊಂಡು ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾಗಲು ಮತ್ತು ಕಷ್ಟಗಳಿಂದಲೂ ಆತಂಕಗಳಿಂದಲೂ ರಕ್ಷಿಸಲ್ಪಟ್ಟು ಶಾಂತಮಯ ಸ್ಥಿತಿಯನ್ನು ಪಡೆಯಲು ಅಲ್ಲಾಹನು ಆದೇಶಿಸಿದ ಪ್ರಕಾರ ಪ್ರಾರ್ಥನೆಗಳನ್ನು ಮಾಡಬೇಕಾಗಿದೆ. ಇವುಗಳೇ ನಮ್ಮ ಆಯುಧಗಳಾಗಿವೆ. ನಾವು ಯಾವಾಗಲೂ ಸ್ಥಿರವಾಗಿ ಈ ಆಯುಧಗಳನ್ನೇ ಹೊಂದಿಕೊಂಡಿರಬೇಕಾಗಿದೆ. ಪ್ರಾರ್ಥನೆಗಳೆಂಬ ಆಯುಧವನ್ನು ಬಿಟ್ಟು ನಾವು ತಾತ್ಕಾಲಿಕವಾದ ಚಿಕ್ಕ ಆಯುಧಗಳ ಕಡೆಗೆ ನೋಡುವುದಾದರೆ ನಮಗೆ ಜಯ ಸಿಗಲಾರದು. ಇಂತಹ ಚಿಕ್ಕ ಆಯುಧಗಳಿಂದ ಯಾರಿಗೂ ಎಂದೂ ವಿಜಯ ಲಭಿಸಲಿಲ್ಲ. ಪ್ರವಾದಿಗಳ ಚರಿತ್ರೆಗಳನ್ನು ನೋಡಿದರೆ ಅವರಿಗೆ ಜಯವು ಪ್ರಾರ್ಥನೆಗಳ ಮೂಲಕವೇ ಲಭಿಸಿತೆಂದು ಕಾಣಿಸುತ್ತದೆ. ವಿಶಿಷ್ಟವಾಗಿ ಇಸ್ಲಾಮಿನ ಚರಿತ್ರೆಯನ್ನು ನೋಡುವುದಾದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮತ್ತು ಖಿಲಾಫತೆ ರಾಶಿದದ ಕಾಲದ ಚರಿತ್ರೆಯನ್ನು ನೋಡುವುದಾದರೆ ಲೌಕಿಕ ಶಕ್ತಿಯ ಪ್ರಯೋಗದ ಮೂಲಕವಲ್ಲ, ಅಲ್ಲಾಹನ ಅನುಗ್ರಹದ ಮೂಲಕವೇ ಜಯಗಳು ಲಭಿಸಿದುವು ಎಂದು ತಿಳಿಯುತ್ತದೆ. ಅಲ್ಲಾಹನ ವಾಗ್ದಾನಗಳ ಪ್ರಕಾರವೇ ಅವರಿಗೆ ಜಯ ಲಭಿಸಿತು. ಆದರೆ ಒಂದು ವಿಷಯವನ್ನು ನೆನಪಿಟ್ಟುಕೊಳ್ಳಬೇಕು. ಅಲ್ಲಾಹನು ವಿಜಯದ ವಾಗ್ದಾನ ನೀಡಿದ್ದರೂ ಜಯವನ್ನು ಗಳಿಸಲು ಜೀವಗಳ ಬಲಿದಾನಗಳನ್ನು ನೀಡಬೇಕಾಯಿತು. ಪ್ರಾರ್ಥನೆಗಳ ಮಟ್ಟವನ್ನು ಉನ್ನತಗೊಳಿಸಬೇಕಾಯಿತು. ಅಲ್ಲಾಹನು ಇದರ ಬಗ್ಗೆ ಸೂಚನೆ ನೀಡುತ್ತಾ ಈರೀತಿ ಹೇಳಿರುವನು: **ಫಸಲ್ಲಿ ಲಿ ರಬ್ಬಿಕ ವನ್‌ಹರ್–** "ನೀನು ನಿನ್ನ ಪ್ರಭುವನ್ನು ಆರಾಧಿಸು. ಬಲಿದಾನಗಳನ್ನು ಅರ್ಪಿಸು." ಈ ಆರಾಧನೆಗಳು ಮತ್ತು ಬಲಿದಾನಗಳು ಅಲ್ಲಾಹನ ಅನುಗ್ರಹಗಳಿಗೆ ನಿಮ್ಮನ್ನು ವಾರೀಸುದಾರರನ್ನಾಗಿ ಮಾಡುವುವು.

ದೀರ್ಘಕಾಲದ ಆತಂಕಭರಿತ ಜೀವನ ಹಾಗೂ ಕಷ್ಟಗಳು ಮತ್ತು ಪರೀಕ್ಷೆಗಳು ನಿಶ್ಶಂಶಯವಾಗಿಯೂ ಮನುಷ್ಯರನ್ನು ಗಾಬರಿಗೊಳ್ಳುವಂತೆ ಮಾಡುತ್ತವೆ ಎನ್ನುವುದು ಮನುಷ್ಯನ ಸಹಜ ಪ್ರಕೃತಿಯಾಗಿದೆ. ಅಂತಹ ಪರಿಸ್ಥಿತಿಗಳಲ್ಲಿ ಪ್ರವಾದಿಗಳು ಮತ್ತು ಅನುಯಾಯಿಗಳು **ಮತಾ ನಸ್ರುಲ್ಲಾಹ್-** "ಅಲ್ಲಾಹನ ಸಹಾಯ ಎಲ್ಲಿದೆ ಯಾವಾಗ ಅದು ಬರುವುದು ಎಂದು ಬೊಬ್ಬಿಡುತ್ತಾರೆ." ಅವರು ಗಾಬರಿಗೊಂಡು ಹೃತ್ಪೂರ್ವಕವಾಗಿ ಹಾಗೆ ಪ್ರಲಾಪಿಸುತ್ತಾರೆ. ಅವರು ಹಾಗೆ ಪ್ರಾರ್ಥಿಸುವುದು ನಿರಾಶೆಯ ಕಾರಣದಿಂದಲ್ಲ. ಬದಲಾಗಿ, ಅವರು ಅಲ್ಲಾಹನು ತಮ್ಮ ಮೇಲೆ ದಯೆದೋರಲು ಮತ್ತು ಅವನ ಅನುಗ್ರಹ ಗಳಿಸಲು ಅವರು ಪೂರ್ಣವಾಗಿ ತಮ್ಮನ್ನು ಅಲ್ಲಾಹನ ಮಡಿಲಲ್ಲಿ ಹಾಕುತ್ತಾರೆ. ಅವರು ಹೆಚ್ಚು ಹೆಚ್ಚಾಗಿ ಪ್ರಾರ್ಥಿಸುತ್ತಾ ಬಲಿದಾನಗಳನ್ನು ಅರ್ಪಿಸುತ್ತಾ ಬೊಬ್ಬಿಡುತ್ತಾರೆ. ಆಗ ಅಲ್ಲಾಹನ ಕಡೆಯಿಂದ ಹೀಗೆ ಶಬ್ದ ಕೇಳಿಸುತ್ತದೆ: **ಅಲಾ ಇನ್ನ ನಸ್ರಲ್ಲಾಹಿ ಖರೀಬುನ್-** "ಆಲಿಸಿರಿ! ನಿಶ್ಚಯವಾಗಿಯೂ ಅಲ್ಲಾಹನ ಸಹಾಯ ಸಮೀಪವಿದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಹ ಅಲ್ಲಾಹನು ಹೀಗೆಯೇ ಹೇಳಿರುವನು. ಅಲ್ಲಾಹನ ಸಹಾಯ ತನ್ನ ಸಮೀಪಕ್ಕೆ ಬಂದಿರುವ ವಿವಿಧ ದೃಶ್ಯಗಳನ್ನು ಅವರು ಕಂಡಿರುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಹ ಇದೇ ಇಲ್‌ಹಾಮ್ ಅವತೀರ್ಣಗೊಂಡಿತ್ತು. ಕಾರ್ಯರೂಪದಲ್ಲೂ ಸಹಾಯ ಸಿಗುವುದನ್ನು ಅವರು ಕಂಡರು. ನಾವು ಸಹ ವಿವಿಧ

ಸಂದರ್ಭಗಳಲ್ಲಿ ಅಲ್ಲಾಹನ ಸಹಾಯದ ದೃಶ್ಯಗಳನ್ನು ಕಂಡಿರುವೆವು. ಇನ್ನು ಮುಂದೆ ಸಹ ನೋಡುವೆವು – **ಇನ್ ಶಾ ಅಲ್ಲಾಹ್.** ಅಲ್ಲಾಹನು ಹೇಳುತ್ತಾನೆ:

**ಅಮ್ಮನ್ ಯುಜೀಬುಲ್ ಮುಝ್ತರ್ರ ಇಝಾ ದಆಹು ವ ಯಕ್‌ಶಿಫುಸ್ಸೂಅ ವ ಯಜ್‌ಅಲುಕುಮ್ ಖುಲಫಾಅಲ್ ಅರ್‌ಝಿ ಅ ಇಲಾಹುನ್ ಮಅಲ್ಲಾಹಿ ಖಲೀಲನ್ ಮಾ ತಝಕ್ಕರೂನ್–** "ಒಬ್ಬ ನಿಸ್ಸಹಾಯ ವ್ಯಕ್ತಿ ಪ್ರಾರ್ಥಿಸುವಾಗ ಅವನ ಕಷ್ಟವನ್ನು ನಿವಾರಿಸುವವನು ಯಾರು? ಪ್ರಾರ್ಥಿಸುವ ನಿಮ್ಮನ್ನು ಮುಂದೆ ಒಂದು ದಿನ ಭೂಮಿಯ ವಾರೀಸುದಾರರನ್ನಾಗಿ ಅವನು ಮಾಡುವನು. ಈ ಸರ್ವಶಕ್ತನಾದ ಅಲ್ಲಾಹನ ಹೊರತು ಬೇರೆ ದೇವನಿದ್ದಾನೆಯೇ? ನೀವು ಉಪದೇಶವನ್ನು ಗಳಿಸುವುದಿಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೆನಪಿಡಿರಿ, ಅಲ್ಲಾಹನು ಯಾರೊಬ್ಬನ ಆಶ್ರಯದ ಆವಶ್ಯಕತೆ ಇಲ್ಲದವನಾಗಿದ್ದಾನೆ. ಅವನೊಂದಿಗೆ ಪದೇ ಪದೇ ಅಳಲಿನೊಂದಿಗೆ ಪ್ರಾರ್ಥಿಸುವುದಿಲ್ಲವಾದರೆ ಅವನು ಲಕ್ಷಿಸಲಾರನು. ನೋಡಿರಿ– ಒಬ್ಬನ ಪತ್ನಿ ಅಥವಾ ಮಕ್ಕಳು ರೋಗಿಗಳಾದರೆ, ಅಥವಾ ಯಾವುದಾದರೂ ಕಠಿಣ ಮೊಕದ್ದಮೆ ಅವನ ಮೇಲೆ ದಾಖಲಿಸಲ್ಪಟ್ಟರೆ ಅವನು ಎಷ್ಟು ಗಾಬರಿಗೊಳ್ಳುತ್ತಾನೆ. ಆದುದರಿಂದ ಪ್ರಾರ್ಥನೆಗಳಲ್ಲಿ ಸತ್ಯವಾದ ಅಳಲು ಮತ್ತು ಹೃದಯಾರ್ದ್ರತೆ ಉಂಟಾಗುವುದಿಲ್ಲವಾದರೆ ಅವು ನಿಷ್ಫಲವಾಗುವುವು. ಪ್ರಾರ್ಥನೆಗಳು ಅಂಗೀಕರಿಸಲ್ಪಡಬೇಕಾದರೆ ಅವುಗಳಲ್ಲಿ ನಿಸ್ಸಹಾಯಕ ಮನೋಭಾವ ಇರಬೇಕಾದುದು ಆವಶ್ಯಕವಾಗಿದೆ. ಅದರ ಬಗ್ಗೆಯೇ **ಅಮ್ಮನ್ ಯುಜೀಬುಲ್ ಮುಝ್ತರ್ರ ಇದಾ ದಆಹು ವಯಕ್‌ಸಿಫುಸ್ಸೂಅ–** "ನಿಸ್ಸಹಾಯಕನಾದ ಓರ್ವ ವ್ಯಕ್ತಿ ಪ್ರಾರ್ಥಿಸುವಾಗ ಅವನ ಕಷ್ಟಗಳನ್ನು ನಿವಾರಿಸುವವನು ಯಾರು? ಎಂದು ಹೇಳಲಾಗಿದೆ."

ನಾವು ನಮ್ಮ ಆರಾಧನೆಗಳಲ್ಲೂ ಪ್ರಾರ್ಥನೆಗಳಲ್ಲೂ ಮೊದಲಿಗಿಂತಲೂ ಹೆಚ್ಚಿನ ಶ್ರದ್ಧೆ ನೀಡಬೇಕಾಗಿದೆ. ನಾವು ಹೃದಯಾರ್ದ್ರತೆಯಿಂದಲೂ ಅಳಲಿನಿಂದಲೂ ಪ್ರಾರ್ಥಿಸಬೇಕು. ಆ ಮೂಲಕ ಅಲ್ಲಾಹನು ದಯೆದೋರುವಂತೆ ಮಾಡಬೇಕು. ಈ ವೇಳೆಯಲ್ಲಿ ಕೆಲವು ಪ್ರಾರ್ಥನೆಗಳನ್ನು ಮಾಡಬೇಕೆಂದು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಅವುಗಳಲ್ಲಿ ಕೆಲವು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸರು ಅಹ್ಮದಿಯಾ ಜಮಾಅತಿನ ಶತವಾರ್ಷಿಕ ಜುಬಿಲಿ ಸಂದರ್ಭದಲ್ಲಿ ಸೂಚಿಸಿದ ಪ್ರಾರ್ಥನೆಗಳಾಗಿವೆ. ಖಿಲಾಫತ್ ಶತವಾರ್ಷಿಕ ಜುಬಿಲಿ ಸಂದರ್ಭದಲ್ಲಿ ನಾನು ಸಹ ಕೆಲವು ಪ್ರಾರ್ಥನೆಗಳನ್ನು ಸೂಚಿಸಿದ್ದೇನೆ. ಅವುಗಳನ್ನು ಮರೆತು ಬಿಡಬೇಡಿರಿ. ಅವುಗಳಲ್ಲಿ ಕೆಲವನ್ನು ಬಿಟ್ಟು ಬಿಡಬೇಡಿರಿ. ಯಾವಾಗಲೂ ಎಲ್ಲಾ ಪ್ರಾರ್ಥನೆಗಳನ್ನು ಮಾಡುತ್ತಾ ಇರಬೇಕಾಗಿದೆ. ಅವುಗಳನ್ನು ನಿಮ್ಮ ಜೀವಿತದ ಭಾಗವನ್ನಾಗಿ ಮಾಡಿರಿ. ನಮಾಝ್‌ಗಳನ್ನು ಶ್ರದ್ಧೆಯಿಂದ ಅನುಷ್ಠಿಸಬೇಕು. ಅವುಗಳನ್ನು ಅನುಷ್ಠಿಸಬೇಕಾದ ರೀತಿಗಳಲ್ಲಿಯೇ ಅನುಷ್ಠಿಸುವುದಾದರೆ ನೀವು ಸರಿಯಾಗಿ ಪ್ರಾರ್ಥಿಸುವವರಾಗುವೆವು.

ನಿಮಗೆ ನೆನಪಿಸಲು ನಾನು ಬಯಸುವ ಪ್ರಾರ್ಥನೆಗಳಲ್ಲಿ ಮೊದಲನೆಯದು **ಸೂರತುಲ್ ಫಾತಿಹ** ಆಗಿದೆ. ಅದನ್ನು ಹೆಚ್ಚು ಹೆಚ್ಚು ಸಲ ಪಠಿಸಿರಿ. ಅದೇರೀತಿ ನಾವು ನಮಾಝ್‌ನಲ್ಲಿ ಪಠಿಸುವ **ದುರೂದ್ ಶರೀಫ್ (ಪ್ರವಾದಿಯವರ ಮೇಲೆ ಅನುಗ್ರಹ ಯಾಚನೆ)** ಬಹಳ ಸಾರಿ ಬೇರೆ ಸಮಯದಲ್ಲೂ ಪುನರಾವರ್ತಿಸುತ್ತಾ ಇರಬೇಕು. ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇಲ್‌ಹಾಮ್ ರೂಪದಲ್ಲಿ ಕಲಿಸಲಾದ ಈ ಕೆಳಗಿನ ದುಆಗಳು: **ಸುಬ್‌ಹಾನಲ್ಲಾಹಿ ವಬಿ ಹಮ್‌ದಿಹೀ ಸುಬ್‌ಹಾನಲ್ಲಾಹಿಲ್ ಅಝೀಮ್. ಅಲ್ಲಾಹುಮ್ಮ ಸಲ್ಲಿಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್.** ಈ ದುಆ ಬಹಳ ಹೆಚ್ಚು ಸಲ ಮಾಡಿರಿ.

ಒಂದು ಹದೀಸು ಹೀಗಿದೆ: ಹಝ್ರತ್ ಅಬೂ ಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ಎರಡು ವಾಕ್ಯಗಳು ಉಚ್ಚರಿಸಲು ಬಹಳ ಸುಲಭವಿದೆ, ಆದರೆ ತೂಕದಲ್ಲಿ ಅವು ಬಹಳ ಭಾರವಾಗಿವೆ. ಅವು ಪರಮ ಕರುಣಾಮಯನಾದ ಅಲ್ಲಾಹನಿಗೆ ಬಹಳ ಪ್ರಿಯವಾಗಿವೆ. ಅದು **ಸುಬ್‌ಹಾನಲ್ಲಾಹಿ ವಬಿ ಹಮ್‌ದಿಹೀ ಸುಬ್‌ಹಾನಲ್ಲಾಹಿ ಅಝೀಮ್** ಎಂಬ ಪ್ರಾರ್ಥನೆಯಾಗಿದೆ. ಈ ಪ್ರಾರ್ಥನೆ ಅಲ್ಲಾಹನಿಗೆ ಬಹಳ ಪ್ರಿಯವಾದುದಾಗಿದೆ. ಅಲ್ಲಾಹನ ಅನುಗ್ರಹಗಳನ್ನು ಗಳಿಸಲು ಇದು ಬಹಳ ಆವಶ್ಯಕವಾದ ಪ್ರಾರ್ಥನೆಯಾಗಿದೆ.

ಈ ಕೆಳಗಿನ ಪ್ರಾರ್ಥನೆ ಸಹ ಮಾಡಬೇಕಾಗಿದೆ. **ರಬ್ಬನಾ ಲಾ ತುಝಿಗ್ ಖುಲೂಬನಾ ಬಅ್‌ದ ಇಝ್ ಹದೈತನಾ ವ ಹಬ್‌ಲನಾ ಮಿಲ್ಲದುನ್‌ಕ ರಹ್ಮತನ್ ಇನ್ನಕ ಅನ್‌ತಲ್ ವಹ್ಹಾಬ್–** "ಓ ನಮ್ಮ ಪ್ರಭು, ನಮಗೆ ನೀನು ಮಾರ್ಗದರ್ಶನ ನೀಡಿದ ನಂತರ ನಮ್ಮ ಹೃದಯಗಳನ್ನು ವಕ್ರಗೊಳಿಸಬೇಡ. ನೀನು ನಮಗೆ ಅನುಗ್ರಹ ನೀಡು. ನೀನೇ ಬಹಳ ಅನುಗ್ರಹಗಳನ್ನು ದಯಪಾಲಿಸುವವನಾಗಿರುವೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನ ಹೊಂದಿದ ನಂತರ ಅವರ ಪುತ್ರಿ ನವಾಬ್ ಮುಬಾರಕ ಬೇಗಮ್ ಸಾಹಿಬರೊಂದಿಗೆ ಕನಸಿನಲ್ಲಿ ಮೇಲೆ ಉಲ್ಲೇಖಿಸಿದ ದುಆ ಬಹಳ ಸಾರಿ ಮಾಡಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರಿಗೆ ಈ ಕನಸಿನ ಬಗ್ಗೆ ತಿಳಿಸಿದಾಗ ಅವರು ಹೇಳಿದರು: ನಾನು ಇನ್ನು ಮುಂದೆ ಸದಾ ಈ ದುಆ ಮಾಡುತ್ತಾ ಇರುವೆನು. ಈ ದುಆ ಸತ್ಯ ವಿಶ್ವಾಸವನ್ನು ಬಲಪಡಿಸುವುದರೊಂದಿಗೆ ಖಿಲಾಫತ್ ವ್ಯವಸ್ಥೆಯೊಂದಿಗೆ ದೃಢ ಸಂಬಂಧ ಸ್ಥಾಪಿಸಲು ಆವಶ್ಯಕವಾದ ಪ್ರಾರ್ಥನೆಯೂ ಆಗಿದೆ.

ಅತಿ ಹೆಚ್ಚು ಲಕ್ಷ್ಯ ನೀಡಬೇಕಾದ ಇನ್ನೊಂದು ಪ್ರಾರ್ಥನೆ ಇದಾಗಿದೆ: **ರಬ್ಬನಾ ಅಫ್‌ರಿಗ್ ಅಲೈನಾ ಸಬ್‌ರನ್ ವ ಸಬ್ಬಿತ್ ಅಖ್‌ದಾಮನಾ ವನ್‌ಸುರ್‌ನಾ ಅಲಲ್ ಖೌಮಿಲ್ ಕಾಫಿರೀನ್. –** "ಓ ನಮ್ಮ ಪ್ರಭು, ನಮ್ಮ ಮೇಲೆ ಸಹನೆಯನ್ನು ಸುರಿಸು. ನಮ್ಮ ಪಾದಗಳಿಗೆ ಸ್ಥಿರತೆ ನೀಡು. ಅವಿಶ್ವಾಸಿಗಳ ವಿರುದ್ಧ ನಮಗೆ ಸಹಾಯ ನೀಡು."

ಇನ್ನೊಂದು ದುಆ ಹೀಗಿದೆ. **ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಮ್ ವ ನಊಝುಬಿಕ ಮಿನ್ ಶುರೂರಿಹಿಮ್–** **"**ಓ ಅಲ್ಲಾಹ್, ಅವರ ಎದೆಯ ಮೇಲೆ ನಾವು ನಿನ್ನನ್ನೇ ನಿಲ್ಲಿಸುತ್ತೇವೆ. ಮತ್ತು ಅವರ ಕೆಡುಕುಗಳಿಂದ ನಾವು ನಿನ್ನಲ್ಲಿ ಅಭಯ ಯಾಚನೆ ಮಾಡುತ್ತೇವೆ.**"** ಅಂದರೆ, ನಮ್ಮ ರಕ್ಷಕನಾದ ಅಲ್ಲಾಹನೇ, ನೀನು ಅವರನ್ನು ಹೇಗೆ ಆಕ್ರಮಣ ಮಾಡಬೇಕೆಂದರೆ ಅವರ ಜೀವನಾಶವಾಗಲಿ. ಅವರ ಕೆಡುಕುಗಳಿಂದ ನಮ್ಮನ್ನು ಸಂರಕ್ಷಿಸು. ಗಲಬೆ ಗೊಂದಲ ಹಿಂಸಾಚಾರಗಳನ್ನು ಮಾಡುವ ದೌರ್ಜನ್ಯಗಾರರ ಶಕ್ತಿಯನ್ನು ಧ್ವಂಸಗೊಳಿಸಬಲ್ಲವನು ನೀನೇ ಆಗಿರುವೆ. ಈ ಅಕ್ರಮಿಗಳನ್ನೂ ನಾಶಗೊಳಿಸು. ಅವರ ಕೆಡುಕುಗಳಿಂದ ರಕ್ಷಿಸಿ ನೀನು ನಮಗೆ ಆಶ್ರಯನೀಡು.

ಯಾವುದಾದರೂ ಜನಾಂಗದವರಿಂದ ಅಪಾಯ ಉಂಟಾಗುವ ಸಂದರ್ಭ ತಲೆದೋರುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಮೇಲಿನ ಪ್ರಾರ್ಥನೆ ಮಾಡುತ್ತಿದ್ದರೆಂದು ಹದೀಸುಗಳಲ್ಲಿ ವರದಿಯಾಗಿದೆ.

ಇನ್ನೊಂದು ದುಆ ಹೀಗಿದೆ: **ಅಸ್ತಗ್‌ಫಿರುಲ್ಲಾಹಿ ರಬ್ಬೀ ಮಿನ್‌ಕುಲ್ಲಿ ಝುನ್‌ಬಿನ್ ವ ಅತೂಬು ಇಲೈಹಿ– "**ಓ ನನ್ನ ಪ್ರಭುವಾದ ಅಲ್ಲಾಹ್, ನಾನು ಎಲ್ಲಾ ಪಾಪಗಳಿಂದ ನಿನ್ನಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ. ನಾನು ಪಶ್ಚಾತಾಪದಿಂದ ನಿನ್ನ ಕಡೆಗೆ ತಿರುಗುತ್ತೇನೆ.**"**

ಈ ಕೆಳಗಿನ ಪ್ರಾರ್ಥನೆ ಸಹ ಬಹಳ ಹೆಚ್ಚು ಪಠಿಸಿರಿ. **ರಬ್ಬಿ ಕುಲ್ಲು ಶೈಯಿನ್ ಖಾದಿಮುಕ. ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ– "**ಓ ನನ್ನ ಪ್ರಭು, ಎಲ್ಲಾ ವಸ್ತುಗಳು ನಿನ್ನ ಸೇವಕರಾಗಿದ್ದಾರೆ. ಓ ನನ್ನ ಪ್ರಭು, ನನ್ನನ್ನು ಸಂರಕ್ಷಿಸು, ನನಗೆ ಸಹಾಯಮಾಡು, ನನ್ನ ಮೇಲೆ ದಯೆದೋರು.**"**

ಇನ್ನೊಂದು ದುಆ ಹೀಗಿದೆ: **ರಬ್ಬನಗ್‌ಫಿರ್‌ಲನಾ ಝುನೂಬನಾ ವ ಇಸ್‌ರಾಫನಾ ಫೀ ಅಮ್‌ರಿನಾ ವ ಸಬ್ಬಿತ್ ಅಖ್‌ದಾಮನಾ ವನ್‌ಸುರ್‌ನಾ ಅಲಲ್ ಖೌಮಿಲ್ ಕಾಫಿರೀನ್– "**ಓ ನಮ್ಮ ಪ್ರಭು, ನಮ್ಮ ತಪ್ಪುಗಳನ್ನೂ ಕುಂದು ಕೊರತೆಗಳನ್ನೂ ನಮ್ಮ ಕೆಲಸಗಳಲ್ಲಿ ಉಂಟಾದ ಅತಿರೇಕಗಳನ್ನೂ ಕ್ಷಮಿಸು. ನಮ್ಮ ಪಾದಗಳನ್ನು ಬಲಪಡಿಸು. ಅವಿಶ್ವಾಸಿಗಳ ವಿರುದ್ಧ ನಮಗೆ ಸಹಾಯ ನೀಡು.**"**

ಮತ್ತೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಇಲ್‌ಹಾಮೀ ದುಆ ಬಹಳ ಪಠಿಸುತ್ತಾ ಇರಬೇಕು. ಈಗ ಶತ್ರುಗಳು ಬಹಳ ಹೆಚ್ಚು ಶತ್ರುತ್ವ ಭರಿತರಾಗಿದ್ದಾರೆ. ಆದುದರಿಂದ ನಾವು ಸಹ ಪ್ರಾರ್ಥನೆಗಳಲ್ಲಿ ಹೆಚ್ಚಿನ ಗಮನ ಹರಿಸಬೇಕಾದ ಅಗತ್ಯವಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ನಾನು ನನ್ನ ಜಮಾಅತಿಗೋಸ್ಕರ ಮತ್ತು ಖಾದಿಯಾನ್ ಬಗ್ಗೆ ಪ್ರಾರ್ಥಿಸುತ್ತಾ ಇದ್ದಾಗ ಹೀಗೆ ಇಲ್‌ಹಾಮ್ ಉಂಟಾಯಿತು: **ಝಿಂದಗೀ ಕೀ ಫೇಶನ್ ಸೆ ದೂರ್ ಜಾ ಪಡೇ ಹೈಂ.** ಅನಂತರ: **ಫಸಹ್ಹಿಖ್‌ಹುಮ್ ತಸ್‌ಹೀಖಾ** ಅವರನ್ನು ಪುಡಿ ಪುಡಿಗೊಳಿಸು. ನನ್ನ ಹೃದಯದಲ್ಲಿ ಹೀಗೆ ಯೋಚನೆ ಉಂಟಾಯಿತು. ಪುಡಿ ಪುಡಿಗೊಳಿಸಬೇಕೆಂದು ನನ್ನೊಂದಿಗೆ ಸಂಬಂಧಿಸಿ ಏಕೆ ಹೇಳಲಾಗುತ್ತಿದೆ? ಆಗ ಒಂದು ವರ್ಷ ಹಿಂದೆ ನನಗೆ ಅವತೀರ್ಣವಾದ ದುಆದ ಕಡೆಗೆ ನನ್ನ ದೃಷ್ಟಿ ಹರಿಯಿತು. ಆ ದುಆ ಬೈತುದ್ದುಆದಲ್ಲಿ ಬರೆದಿಡಲಾಗಿದೆ. ಅದು ಹೀಗೆ: **ಯಾ ರಬ್ಬೀ ಪಸ್‌ಮಿಅ್ ದುಆಈ ವ ಮಝ್ಝಿಖ್ ಅಅ್‌ದಾಅಕ ವ ಅಅ್‌ದಾಈ ವನ್‌ಜುಝ್‌ವಅ್‌ದಕ ವನ್‌ಸುರ್ ಅಬ್‌ದಕ ವ ಅರಿನಾ ಅಯ್ಯಾಮಕ ವ ಶಹ್ಹಿರ್ ಲನಾ ಹಿಸಾಮಕ ವಲಾ ತಝರ್ ಮಿನಲ್ ಕಾಫಿರೀನ ಶರೀರಾ– "**ಓ ನನ್ನ ಪ್ರಭು, ನನ್ನ ಪ್ರಾರ್ಥನೆ ಆಲಿಸು. ನಿನ್ನ ಶತ್ರುಗಳನ್ನೂ ನನ್ನ ಶತ್ರುಗಳನ್ನೂ ತುಂಡರಿಸು. ನೀನು ನಿನ್ನ ವಾಗ್ದಾನ ಈಡೇರಿಸು. ನಿನ್ನ ದಾಸನಿಗೆ ಸಹಾಯಮಾಡು. ನಿನ್ನ ಮಹಿಮೆಯ ಪ್ರಕಟಣೆಯ ದಿನಗಳನ್ನು ತೋರಿಸು. ನಮಗೋಸ್ಕರ ನಿನ್ನ ಖಡ್ಗವನ್ನು ಬೀಸು. ಅವಿಶ್ವಾಸಿಗಳಲ್ಲಿ ಕೆಟ್ಟವರಾದ ಯಾರನ್ನೂ ಸಹ ಬಾಕಿಯಾಗಿ ಇರಿಸಬೇಡ.**"**

ನಾನು ಉಲ್ಲೇಖಿಸಿದ ಈ ಪ್ರಾರ್ಥನೆಗಳ ಬಗ್ಗೆ ಬಹಳ ಶ್ರದ್ಧೆ ನೀಡುವ ಆವಶ್ಯಕತೆ ಇದೆ.

ಈಗ ನಾನು **ಮೇ ದಿನಾಂಕ 26ರಂದು ರಬ್ವದಲ್ಲಿ ರಕ್ತಸಾಕ್ಷಿಯಾದ** ನಮಗೆ ಬಹಳ ಪ್ರಿಯರಾಗಿದ್ದ ಮತ್ತು ಜನರಿಗೆ ಹಿತವುನ್ನುಂಟುಮಾಡುವವರಾಗಿದ್ದ **ಡಾಕ್ಟರ್ ಮಹ್‌ದೀ ಅಲಿ ಖಮರ್**ರವರ ಬಗ್ಗೆ ಹೇಳಲು ಬಯಸುತ್ತೇನೆ. ಬಿಹಿಶ್ತಿ ಮಖ್‌ಬರಕ್ಕೆ ಅವರು ಹೋಗುತ್ತಿದ್ದಾಗ ಬೆಳಿಗ್ಗೆ 5 ಗಂಟೆಯ ಸಮಯ ಮೋಟರ್ ಸೈಕಲ್‌ನಲ್ಲಿ ಬಂದ ಅಪರಿಚಿತ ದುಷ್ಕರ್ಮಿಗಳು ಗುಂಡು ಹೊಡೆದು ಅವರನ್ನು ಹತ್ಯೆಗೈದರು. 11 ಗುಂಡುಗಳು ಡಾಕ್ಟರ್ ಸಾಹೇಬರಿಗೆ ತಗಲಿದ್ದು ಅವರು ಸ್ಥಳದಲ್ಲೇ ಶಹೀದ್ ಆದರು – ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

ಅಮೇರಿಕದಲ್ಲಿ ಪ್ರಸಿದ್ಧ ಹೃದಯ ತಜ್ಞರಾಗಿದ್ದ ಅವರು '**ವಕ್‌ಫೇ ಆರ್‌ಝೀ**' ಪ್ರಕಾರ ರಬ್ವದ **ತಾಹಿರ್ ಹಾರ್ಟ್ ಇನ್‌ಸ್ಟಿಟ್ಯೂಟ್‌ಗೆ** ಆಗಮಿಸಿದ್ದರು. ಇದರ ಮೊದಲು ಸಹ ಎರಡು ಸಲ ಅವರು ರಬ್ವದಲ್ಲಿ 'ವಕ್‌ಫೇ ಆರ್‌ಝೀ' ಪ್ರಕಾರ ಸೇವೆ ಸಲ್ಲಿಸಲು ಆಗಮಿಸಿದ್ದರು.

ನಂತರ ಹಝ್ರತ್ ಖಲೀಫತುಲ್ ಮಸೀಹ್ ಅವರು ಶಹೀದ್ ಡಾಕ್ಟರ್ ಮಹ್‌ದಿ ಅಲಿ ಖಮರ್ ರವರ ಕುರಿತು ದೀರ್ಘವಾದ ವಿವರಣೆಗಳನ್ನು ನೀಡಿದರು. ಅವರು ಮಾಡಿದ ಜನಸೇವೆ ಮತ್ತು ಜಮಾಅತಿನೊಂದಿಗೆ ಅವರಿಗಿದ್ದ ಉತ್ತಮ ಸಂಬಂಧವನ್ನು ವಿವರಿಸಿದ ನಂತರ ಹುಝೂರ್ ಈರೀತಿ ಹೇಳಿದರು:

ಹುತಾತ್ಮರಾದ ಆ ಮಹನೀಯರು ತಮ್ಮ ಜೀವಿತಕಾಲದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಜಯವನ್ನು ಕಾಣುತ್ತಾ ಜನರ ಸೇವೆ ಮಾಡುತ್ತಾ ಇದ್ದರು. ಅವರು ಎಂತಹ ಮೃತ್ಯುವನ್ನು ಪಡೆದರೆಂದರೆ ಅವರು ಅಲ್ಲಾಹನ ಸನ್ನಿಧಿಯಲ್ಲಿ ಶಾಶ್ವತ ಜೀವಿತವನ್ನು ಪಡೆಯುವವರಾದರು. ನಮ್ಮ ಈ ಪ್ರಿಯ ಸಹೋದರನಿಗೆ ಅಲ್ಲಾಹನು ಉನ್ನತವಾದ ಪದವಿಯನ್ನು ದಯಪಾಲಿಸಲಿ. ಅವರ ಪತ್ನಿಗೂ ಮಕ್ಕಳಿಗೂ ಅಲ್ಲಾಹನು ಸಂರಕ್ಷಣೆ ನೀಡಲಿ.

ನಾನು ಈ ಮೊದಲು ಹೇಳಿದ ಹಾಗೆ ನಮ್ಮ ಅಭಿವೃದ್ಧಿಗೋಸ್ಕರ ಮತ್ತು ಶತ್ರುಗಳನ್ನು ಸೋಲಿಸಲು ನಮ್ಮ ಬಳಿ ಇರುವ ಬಹಳ ದೊಡ್ಡ ಅಸ್ತ್ರ ದುಆ ಆಗಿದೆ. ಅದರೊಂದಿಗೆ ನಾವು ಕೈಗೊಳ್ಳಬೇಕಾದ ಕೆಲವು ಬಾಹ್ಯ ವ್ಯವಸ್ಥೆಗಳ ಬಗ್ಗೆ ಸಹ ಅಲ್ಲಾಹನು ನಮ್ಮ ಗಮನ ಸೆಳೆದಿದ್ದಾನೆ. ಅದನ್ನು ಸಹ ಸಾಧ್ಯವಿರುವಷ್ಟು ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ರಬ್ವದ ವ್ಯವಸ್ಥೆ ನೋಡಿಕೊಳ್ಳುವವರು ಹೆಚ್ಚು ಜಾಗರೂಕತೆಯಿಂದ ವರ್ತಿಸಬೇಕು. ಸಾಧ್ಯವಿರುವಷ್ಟು ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡು ಅನಂತರ ಪರಿಣಾಮವನ್ನು ಅಲ್ಲಾಹನಿಗೆ ಬಿಟ್ಟು ಬಿಡಬೇಕಾಗಿದೆ. ಅದೂ ಅಲ್ಲದೆ, ರಬ್ವದ ಪ್ರತಿಯೊಬ್ಬ ನಾಗರಿಕ ಜಾಗರೂಕನಾಗಬೇಕು. ನಮ್ಮ ಈ ಪ್ರಿಯ ಶಹೀದ್ ಸಹೋದರ ರಬ್ವಾದಲ್ಲಿ ತನ್ನ ರಕ್ತವನ್ನು ಚೆಲ್ಲಿಕೊಂಡು, ದುಆಗಳ ಕಡೆಗೆ ನಾವು ಹೆಚ್ಚಿನ ಗಮನ ಹರಿಸುವಂತೆ ಮಾಡಿದ್ದಾರೆ. ಹಾಗೂ ನಾವು ಜಾಗರೂಕರಾಗಿರುವಂತೆ ಮಾಡಿದ್ದಾರೆ. ಆದುದರಿಂದ ನಾವು ಇದರ ಕಡೆಗೆ ಹೆಚ್ಚು ಗಮನ ಹರಿಸಬೇಕಾದ ಆವಶ್ಯಕತೆಯಿದೆ. ಲೋಕದಲ್ಲಿರುವ ಎಲ್ಲ ಅಹ್ಮದಿಯರೂ ಪಾಕಿಸ್ತಾನದ ಅಹ್ಮದಿಯರಿಗಾಗಿ ಹೆಚ್ಚು ಹೆಚ್ಚು ಪ್ರಾರ್ಥಿಸಬೇಕಾಗಿದೆ. ಯಾಕೆಂದರೆ ಅವರು ಅತ್ಯಂತ ಕ್ಲಷ್ಟಕರವಾದ ಮತ್ತು ಸಹಿಸಲಸಾಧ್ಯವಾದಂತಹ ದಾರುಣವಾದ ಅವಸ್ಥೆಯಲ್ಲಿ ಬದುಕುತ್ತಿದ್ದಾರೆ. ಈ ಸ್ಥಿತಿ ಇನ್ನೂ ಹೆಚ್ಚು ಹೆಚ್ಚು ಕಠಿಣವಾಗುತ್ತಾ ಹೋಗುತ್ತಿದೆ.

ಈಗ ಪಾಕಿಸ್ತಾನ ಪೂರ್ಣವಾಗಿ ಹಿಂಸೆಯಿಂದ ಭರಿತವಾಗಿದೆ. ಕೆಲವು ದಿವಸಗಳ ಹಿಂದೆ **ಹೈಕೋರ್ಟ್‌ನೊಳಗೆ ಒಬ್ಬ ಮಹಿಳೆಯನ್ನು ಕಲ್ಲೆಸೆದು ಕೊಲ್ಲಲಾಯಿತು**. ಪ್ರತಿದಿನ ಅಲ್ಲಿ ಕೊಲೆ ಮತ್ತು ವಿಧ್ವಂಸಕ ಕೆಲಸ ನಡೆಯುತ್ತಿದೆ. ಪಾಕಿಸ್ತಾನದಲ್ಲಿ ನಡೆಯುವ ವಿಧ್ವಂಸಕ ಕೃತ್ಯಗಳೆಲ್ಲವೂ ಅಲ್ಲಾಹ್ ಮತ್ತು ಅವನ ಪ್ರವಾದಿಯ ಹೆಸರಿನಲ್ಲಿ ನಡೆಯುತ್ತಿದೆ. ಸರ್ವ ಮಾನವರ ಹಿತೈಷಿಯಾಗಿದ್ದ ಸಂದೇಶವಾಹಕರ ಹೆಸರಲ್ಲಿ ದೌರ್ಜನ್ಯಗಳನ್ನು ನಡೆಸಲಾಗುತ್ತಿದೆ. ಸಕಲ ಲೋಕಗಳಿಗೆ ಅನುಗ್ರಹದಾಯಕರಾಗಿದ್ದ ಆ ಮಹಾನುಭಾವರ ಹೆಸರಲ್ಲಿ ದೌರ್ಜನ್ಯ ನಡೆಸಲಾಗುತ್ತಿದೆ. ಇದು ನಮಗೆ ಬಹಳ ನೋವನ್ನುಂಟುಮಾಡುತ್ತದೆ. ಆದುದರಿಂದ ಈ ಜನರು ದೌರ್ಜನ್ಯಗಳನ್ನು ಕನಿಷ್ಟಪಕ್ಷ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಹೆಸರಲ್ಲಿ ಮಾಡದಿರಲಿ. ಅವರು ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸದಿರಲಿ. ಆದರೆ ಈ ಜನರಿಗೆ ಬುದ್ಧಿ ಬರುವುದೇ ಇಲ್ಲ. ಅವರು ಯಾವ ದಿಶೆಯಲ್ಲಿ ಸಾಗುತ್ತಿದ್ದಾರೆಂಬ ಬಗ್ಗೆ ಅವರಿಗೆ ಅರಿವೇ ಇಲ್ಲ. **ಅಲ್ಲಾಹನ ವಿಧಿನಿರ್ಣಯ ಜಾರಿಗೊಳ್ಳುವಾಗ (ಅದು ಖಂಡಿತ ಜಾರಿಗೊಳ್ಳುವುದು) ಈ ಜನರು ನಾಮಾವಶೇಷವಾಗುವರು. ದೌರ್ಜನ್ಯಗಾರರಾಗಲಿ ಅವರಿಗೆ ಆಶ್ರಯನೀಡುವವರಾಗಲಿ ಬಾಕಿಯಾಗಿ ಉಳಿಯಲಾರರು. ನಾವು ಬಹಳ ಪ್ರಾರ್ಥಿಸಬೇಕು. ಜನರು ಮತ ಪಂಡಿತರ ಹಿಡಿತದಿಂದ ಮುಕ್ತರಾಗಿ ಸತ್ಯವನ್ನು ಗ್ರಹಿಸಿ ಈ ಕಾಲಘಟ್ಟದ ಇಮಾಮರನ್ನು ಗುರುತಿಸುವವರಾಗಲಿ**.

ಜುಮುಅ ನಮಾಝ್ ನಂತರ ಇನ್‌ಶಾ ಅಲ್ಲಾಹ್ ಅವರ ನಮಾಝ್ ಜನಾಝ ಗಾಯಿಬ್ ಅನುಷ್ಠಿಸುವೆನು.

---------------*****---------------

*Friday Sermon delivered by Hadrath Khaleefatul Masih Al Khamis(atba)*
*at Masjid Baithul Futhuh, London on 30-05-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By: **Kannada Khutuba Desk*** (comes under the **Kannada Isha'at Team**)
*Ahmadiyya Muslim Jama`at, Karnataka*

*Email*: **khutuba.kannada@gmail.com**